**ದಿನಾಂಕ 02/07/2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ಶ್ರೀ ಎಂ.ಈ.ಎಸ್. ವಕೀಲರಿಂದ**

1. ವಾದಿ ಈ ದಾವೆಯನ್ನು ಯಾವ ಕಾರಣಕ್ಕಾಗಿ ಸಲ್ಲಿಸಿದ್ದಾರೋ ನನಗೆ ಗೊತ್ತಿಲ್ಲ. ನಾನು ಈ ಪ್ರಕರಣದಲ್ಲಿ ನನ್ನ ತಕರಾರನ್ನು ಸಲ್ಲಿಸಿದ್ದೇನೆ. ನನ್ನ ತಂದೆಗೆ ಇಬ್ಬರು ಗಂಡು ಹಾಗೂ ಒಬ್ಬಳು ಹೆಣ್ಣುಮಗಳು ಜಯಮ್ಮ ಇರುತ್ತಾರೆ. ಜಯಮ್ಮನಿಗೆ ಮದುವೆ ಆಗಿರುತ್ತದೆ. ಆಕೆಯ ಗಂಡನ ಹೆಸರು ದೇವರಾಜ ಅವರ ಊರು ಮನವಳ್ಳಿ. ವಾದಿ ಅಂಕನಹಳ್ಳಿಯ ವಾಸಿ ಆಗಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ.

2. ಸರ್ವೆ ನಂ. 38/1 ರ ಒಟ್ಟು 5 ಎಕರೆ 26 ಗುಂಟೆ ವಿಸ್ತೀರ್ಣ ಇರುತ್ತದೆ. ಸದರಿ ಜಮೀನು ನನ್ನ ತಂದೆಗೆ ದರಕಾಸ್ತಿನ ಮೂಲಕ ಬಂದಿರುತ್ತದೆ. ನನ್ನ ತಂದೆ ಸದರಿ ಜಮೀನನ್ನು ಅಮೀರ್ ಖಾನ್ ರವರಿಗೆ 4 ವರೆ ಎಕರೆ ಮಾರಾಟ ಮಾಡಿದ್ದು, ತದನಂತರ ಆತನ ಮಗನಾದ ಕಲಂದರ್ ಖಾನ್ ರವರಿಗೆ ಬಂದಿರುತ್ತದೆ. ಸದರಿ ಅದೇ ಸರ್ವೆ ನಂಬರಿನಲ್ಲಿ 1 ಎಕರೆ 1 ಗುಂಟೆಯನ್ನು ಚನ್ನಕೇಶವಯ್ಯನವರಿಗೆ ಮಾರಾಟ ಮಾಡಿರುತ್ತಾರೆ. ಸದರಿ ಮಾರಾಟ ಆಗಬೇಕಾದರೆ ನಾವು ಹುಟ್ಟೇ ಇರಲಿಲ್ಲ. ಸದರಿ ಮಾರಾಟ ಯಾವ ವರ್ಷದಲ್ಲಿ ಆಗಿರುತ್ತದೋ ನನಗ ಗೊತ್ತಿಲ್ಲ.

3. ದರಕಾಸ್ತಿನ ಮೂಲಕ ಬಂದಂತಹ ಜಮೀನು ಪಿ.ಟಿ.ಸಿ.ಎಲ್. ಕಾಯಿದೆಯ ಉಲ್ಲಂಘನೆಯಲ್ಲಿದ್ದು ಅದನ್ನು ರದ್ದು ಮಾಡಬೇಕೆಂದು ನೀವು ಉಪ ವಿಭಾಗಾಧಿಕಾರಿಗಳಿಗೆ ಮೇಲ್ಮನವಿ ಸಲ್ಲಿಸಿದ್ದಿರಾ ಎಂಬ ಪ್ರಶ್ನೆಗೆ ಸಾಕ್ಷಿ ಹೌದು ಎಂದು ಒಪ್ಪುತ್ತಾರೆ. ಸದರಿ ಮೇಲ್ಮನವಿ ಪ್ರಕರಣ ಸಂಖ್ಯೆ ಎಲ್.ಎನ್.ಡಿ.ಎಸ್.ಸಿ., ಎಸ್.ಟಿ. ಹೆಚ್.ಎನ್.ಪಿ. 3/2004-05 ಎಂದರೆ ನನಗೆ ಗೊತ್ತಿಲ್ಲ. ಸದರಿ ಮೇಲ್ಮನವಿಯನ್ನು ನಾನೇ ಸಲ್ಲಿಸಿರುತ್ತೇನೆ. ಯಾವ ಯಾವ ದಾಖಲೆಗಳನ್ನು ಮೇಲ್ಮನವಿ ಅರ್ಜಿ ಜೊತೆಗೆ ಸಲ್ಲಿಸಿರುತ್ತೇವೋ ನನಗೆ ಈಗ ನೆನಪಿಲ್ಲ. ಅಮೀರ್ ಖಾನ್ ಮತ್ತು ಚನ್ನಕೇಶವಯ್ಯನವರಿಗೆ ಆಗಿದ್ದಂತಹ ಕ್ರಯಪತ್ರಗಳನ್ನು ಉಪ ವಿಭಾಗಾಧಿಕಾರಿಗಳಿಗೆ ನೀಡಿರಬಹುದು. ನನ್ನ ತಂದೆಯ ಮರಣ ಪ್ರಮಾಣ ಪತ್ರವನ್ನು ಸದರಿ ಮೇಲ್ಮನವಿಯಲ್ಲಿ ಹಾಕಿರುತ್ತೇನೆ. ಸಾಕ್ಷಿಗೆ ಪ್ರಮಾಣ ಪತ್ರವೊಂದನ್ನು ತೋರಿಸಿ ಇದು ನಿಮ್ಮ ಅರ್ಜಿಯೇ ಹಾಗೂ ಇದರಲ್ಲಿರುವ ಭಾವಚಿತ್ರ ನಿಮ್ಮದೇ ಎಂಬ ಪ್ರಶ್ನೆಗೆ ಸಾಕ್ಷಿ ಹೌದು ಎಂದು ಉತ್ತರಿಸಲು ಸದರಿ ಪ್ರಮಾಣ ಪತ್ರದ ದೃಢೀಕೃತ ನಕಲನ್ನು ನಿ.ಪಿ 6 ಎಂದು ಗುರುತಿಸಲಾಯಿತು. ಉಪ ವಿಭಾಗಾಧಿಕಾರಿಗಳಿಗೆ ನಮ್ಮ ಕುಟುಂಬದ ವಂಶವೃಕ್ಷವನ್ನು ಸಹ ಹಾಕಿರುತ್ತೇನೆ. ಸಾಕ್ಷಿಗೆ ಉಪ ವಿಭಾಗಾಧಿಕಾರಿಗಳ ಮುಂದೆ ಸಲ್ಲಿಸಿರುವ ದೃಢೀಕೃತ ವಂಶವೃಕ್ಷದ ಪ್ರತಿಯನ್ನು ತೋರಿಸಿ ಇದರಲ್ಲಿ ದೇವರಾಜು

ಎಂದು ಸಹಿ ಮಾಡಿರುವುದು ನೀವೇನೇ ಎಂಬ ಪ್ರಶ್ನೆಗೆ ಸಾಕ್ಷಿ ಹೌದು ಎಂದು ಒಪ್ಪಲು ಸದರಿ ವಂಶವೃಕ್ಷದ ದೃಢೀಕೃತ ನಕಲನ್ನು ನಿ.ಪಿ 7 ಎಂದು ಗುರುತಿಸಲಾಯಿತು. ಸದರಿ ವಂಶವೃಕ್ಷದಲ್ಲಿ ನನ್ನ ತಂದೆಗೆ ಇಬ್ಬರು ಹೆಂಡತಿಯರೆಂತಲೂ ಹಾಗೂ 2 ನೇ ಕಾಳಮ್ಮನಿಗೆ 4 ಮಂದಿ ಮಕ್ಕಳು ಎಂತಲೂ ನಾನು ಬರೆಸಿರುತ್ತೇನೆ ಎಂದರೆ ಸರಿಯಲ್ಲ.

4. ನನ್ನ ತಂದೆಗೆ ಬಂದಂತಹ ಆಸ್ತಿಗಳನ್ನು ಎಷ್ಟು ಮಂದಿ ಮಧ್ಯದಲ್ಲಿ ವಿಭಾಗ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ನನ್ನ ತಂದೆಗೆ ಸೇರಿದಂತಹ ಉಳಿದಂತಹ ಜಮೀನುಗಳು ಕಂದಾಯ ಕಡತಗಳಲ್ಲಿ ಯಾರ ಹೆಸರಿನಲ್ಲಿ ಇರುತ್ತದೋ ನನಗೆ ಗೊತ್ತಿಲ್ಲ. ವಾದಿ ಸರ್ಕಾರಿ ಸೇವೆಯಲ್ಲಿ ಇದ್ದ ಕಾರಣ ನಮ್ಮ ಕಟುಂಬದ ಇತರೆ ಸದಸ್ಯರ ಪರವಾಗಿ ನಾನೇ ಉಪ ವಿಭಾಗಾಧಿಕಾರಿಗಳ ಮುಂದೆ ಮೇಲ್ಮನವಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಉಪ ವಿಭಾಗಾಧಿಕಾರಿಗಳು ಅಮೀರ್ ಖಾನ್ ಮತ್ತು ಚನ್ನಕೇಶವಯ್ಯ ರವರಿಗೆ ಆದಂತಹ ಮಾರಾಟ ಪಿ.ಟಿ.ಸಿ.ಎಲ್. ಕಾಯಿದೆಯ ಉಲ್ಲಂಘನೆಯಲ್ಲಿ ಆಗಿದ್ದು ಅದನ್ನು ನನ್ನೊಬ್ಬನಿಗೆ ಹಿಂತಿರುಗಿಸಿ ನೀಡಿರುತ್ತಾರೆ. ಅಮೀರ್ ಖಾನ್ ಮತ್ತು ಚನ್ನಕೇಶವಯ್ಯನವರಿಗೆ ಮಾರಾಟ ಮಾಡುವಾಗ ನಿಮ್ಮಗಳನ್ನು ಅಪ್ರಾಪ್ತ ವಯಸ್ಕರಾಗಿದ್ದ ಕಾರಣ ಮೈನರ್ ಗಾರ್ಡಿಯನ್ ಎಂದು ತೋರಿಸಿಕೊಂಡು ಮಾರಾಟ ಮಾಡಿರುತ್ತಾರೆ ಎಂಬ ಸೂಚನೆಗೆ ಸಾಕ್ಷಿ ಹೇಳುತ್ತಾರೆ ನಾವು ಆಗ ಹುಟ್ಟೇ ಇರಲಿಲ್ಲ ಎಂದು.

5. ಉಪ ವಿಭಾಗಾಧಿಕಾರಿಗಳ ಆದೇಶದ ನಂತರ ವಾದಿಗೆ ಪಾಲು ಕೊಡಬಾರದೆಂಬ ಉದ್ದೇಶದಿಂದ 3 ನೇ ಪ್ರತಿವಾದಿಗೆ ದಾನಪತ್ರ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಹೇಳುತ್ತಾರೆ ಆಕೆಯ ಒಡವೆಗಳನ್ನು ವ್ಯಾಜ್ಯಗಳಿಗಾಗಿ ಅಡ ಇಟ್ಟಿದ್ದ ಕಾರಣ ಆಕೆಗೆ ನೀಡಿರುತ್ತೇನೆ ಎಂದು. ಒಡವೆ ಅಡಮಾನ ಅಥವಾ ಮಾರಾಟ ಮಾಡಿದ ಬಗ್ಗೆ ಯಾವುದಾದರೂ ದಾಖಲೆ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ.

6. ವಾದಿ ದೋಳಯ್ಯನ ಮಗನಾಗಿದ್ದರೂ ಆತ ವೃತ್ತಿಯಲ್ಲಿ ಇದ್ದ ಕಾರಣ ಪರಿಸ್ಥಿತಿಯನ್ನು ದುರುಪಯೋಗ ಪಡಿಸಿಕೊಂಡು ಆತನಿಗೆ ದಾವಾ ಸ್ವತ್ತುಗಳಲ್ಲಿ ಭಾಗ ನೀಡುತ್ತಿಲ್ಲ ಎಂದರೆ ಸರಿಯಲ್ಲ. ವಾದಿ ಕಟ್ಟಳ್ಳಿ ಜವರಯ್ಯನ ಮಗ ಎಂಬುದರ ಬಗ್ಗೆ ನೀವು ಯಾವುದಾದರೂ ದಾಖಲೆ ಹಾಜರುಪಡಿಸಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ.

7. ವಾದಿ, ನಾನು, ಜಯಮ್ಮ ಹಾಗೂ ಸ್ವಾಮಿ ಎಲ್ಲರೂ ನಮ್ಮ ತಂದೆಯ ಮರಣಾನಂತರ ವಾರಸುದಾರರು ಆಗಿರುವುದರಿಂದ ಎಲ್ಲರಿಗೂ ದಾವಾ ಸ್ವತ್ತುಗಳಲ್ಲಿ ಸಮನಾದ ಹಕ್ಕು ಬರಬೇಕು ಎಂದರೆ ಸರಿಯಲ್ಲ. ಎಲ್ಲಾ ವಿಚಾರಗಳು ಗೊತ್ತಿದ್ದರೂ ದೊಡ್ಡಣ್ಣನಾದ ವಾದಿಗೆ ದಾವಾ ಸ್ವತ್ತುಗಳಲ್ಲಿ ಭಾಗ

ಕೊಡಬಾರದೆಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಲ್ಲಿ ವಾದಿಗೂ ಭಾಗ ಇರುತ್ತದೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

**ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.**

**ಓ.ಹೇ.ಕೇ.ಸ.ಇ.**

**ಜೆಎಂಎಫ್‌ಸಿ., ಹೊಳೆನರಸೀಪುರ.**